**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ,**
**ಪೀಠಾಸೀನ ಕೊಳ್ಳೇಗಾಲ**

**ಎಸ್.ಸಿ. 5028/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಬಿ.ಕೆ. ಮಹೇಶ್ ಕುಮಾರ್ | **ಪ್ರಮಾಣ ವಚನ ಭೋಧಿಸಿದ ದಿನಾಂಕ** |
| **ತಂದೆ ಹೆಸರು** | : | ಲೇಟ್ ಬಿ. ಕೆಂಪಯ್ಯ | 07.08.2026 |
| **ವಯಸ್ಸು** | : | 43 ವರ್ಷ | |
| **ವೃತ್ತಿ** | : | ಪಿ.ಎಸ್.ಐ ಜಿಲ್ಲಾ ಪೋಲೀಸ್ ಕಚೇರಿ, ಮಂಡ್ಯ | **ಪ್ರಾ.ಸಾಃ 14** |
| **ವಾಸ ಸ್ಥಳ** | : | ಮಂಡ್ಯ | **ಚಾ.ಸಾಃ 45** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**ನಾನು ದಿಃ 24.01.2023 ರಿಂದ ದಿಃ 10.08.2024 ರವರೆಗೆ ಪಿ.ಎಸ್.ಐ ಆಗಿ ಕೊಳ್ಳೇಗಾಲ ಪಟ್ಟಣ ಪೊ.ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.**

ದಿಃ 1.06.2024 ರಂದು ರಾತ್ರಿ 12.20 ಗಂಟೆ ಸಮಯದಲ್ಲಿ ಬಾತ್ಮಿದಾರರಿಂದ ಟಿ.ಸಿ ಹುಂಡಿ ಗ್ರಾಮದಲ್ಲಿ ಯಾರೋ ಮೃತಪಟ್ಟಿದ್ದಾರೆ ಎಂದು ಮಾಹಿತಿ ಬಂದಿದ್ದು, ಅದರಂತೆ ನಾನು ಸದರಿ ಸ್ಥಳಕ್ಕೆ ತೆರಳಿದಾಗ ಕವಿತಾ ಎಂಬ ನೇಣು ಹಾಕಿಕೊಂಡು ಮೃತಪಟ್ಟಿದ್ದರು. ಸ್ಥಳದಲ್ಲಿ ಚಾಸಾ 1 ರವರು ನೀಡಿದ ದೂರನ್ನು ಪಡೆದು, ಪ್ರಕರಣ ದಾಖಲಿಸಲು ಚಾಸಾ 42ರ ವರ ಮೂಲಕ ಸದರಿ ದೂರನ್ನು ಠಾಣೆಗೆ ಕಳುಹಿಸಿರುತ್ತೇನೆ. ಪಿರ್ಯಾದಿಯನ್ನು ನಿಪಿ 1 ಎಂದು ಈಗಾಗಲೇ

ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 1(ಸಿ) ಎಂದು ಗುರುತಿಸಲಾಯಿತು. ಅದೇ ದಿನ ರಾತ್ರಿ 1.00 ಗಂಟೆಯಿಂದ 3.00 ಗಂಟೆಯವರೆಗೆ ಪಂಚರಾದ ಚಾಸಾ 4 ಮತ್ತು 19 ರವರ ಸಮಕ್ಷಮ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನುಜರುಗಿಸಿರುತ್ತೇನೆ. ಪಂಚನಾಮೆಯನ್ನು ನಿಪಿ 2 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 2(ಡಿ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆಸಿರುತ್ತೇನೆ. ಭಾವಚಿತ್ರಗಳನ್ನು ನಿಪಿ 3 ರಿಂದ 7 ಎಂದು ಈಗಾಗಲೇ ಗುರುತಿಸಲಾಗಿದೆ. ನಿಪಿ 2 ರ ಸಮಯದಲ್ಲಿ ಮೃತಳು ದಿಃ 17.05.2024 ರಂದು ಚಾ.ನಗರದ ಸಿಮ್ಸ್ ಆಸ್ಪತ್ರೆಯಲ್ಲಿ ಹೊರರೋಗಿಯಾಗಿ ಚಿಕಿತ್ಸೆ ಪಡೆದ ಆಸ್ಪತ್ರೆಯ ದಾಖಲಾತಿಯನ್ನು, ದಿಃ 18.05.2024 ಕೊಳ್ಳೇಗಾಲ ಸರ್ಕಾರಿ ಆಸ್ಪತ್ರೆಯಲ್ಲಿ ಹೊರರೋಗಿಯಾಗಿ ಚಿಕಿತ್ಸೆ ಪಡೆದ ಆಸ್ಪತ್ರೆಯ ದಾಖಲಾತಿಯನ್ನು, 1 ನೇ ಆರೋಪಿ ಮತ್ತು ಮೃತಳ ಮದುವೆ ದಾಖಲಾತಿಯನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಚಾ.ನಗರದ ಸಿಮ್ಸ್ ಆಸ್ಪತ್ರೆಯ ದಾಖಲಾತಿಯನ್ನು ನಿಪಿ 8 ಎಂದು ಈಗಾಗಲೇ ಗುರುತಿಸಲಾಗಿದೆ. ಕೊಳ್ಳೇಗಾಲ ಸರ್ಕಾರಿ ಆಸ್ಪತ್ರೆಯ ದಾಖಲಾತಿಯನ್ನು ನಿಪಿ 39 ಎಂದು ಗುರುತಿಸಲಾಯಿತು. ಮದುವೆಯ ದಾಖಲಾತಿಯನ್ನು ನಿಪಿ 11 ಎಂದು ಈಗಾಗಲೇ ಗುರುತಿಸಲಾಗಿದೆ. ಅದೇ ದಿನ ಚಾಸಾ 46 ರವರು ಆರೋಪಿತರ ಪತ್ತೆಗಾಗಿ ನನ್ನನ್ನು ಮತ್ತು ಸಿಬ್ಬಂದಿಯವರನ್ನು ನೇಮಿಸಿರುತ್ತಾರೆ. ನಾನು ಮತ್ತು ಸಿಬ್ಬಂದಿಯವರು ಚಾ.ನಗರದ ಬಿಸಿಲುವಾಡಿಯಲ್ಲಿ, ಬಾತ್ಮಿದಾರರಿಂದ ಬಂದಮಾಹಿತಿಯಂತೆ ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ಅಂಬೇಡ್ಕರ್ ಭವನದ ಹಿಂಭಾಗಗ ಇರುವ ಖಾಲಿ ಜಾಗದಲ್ಲಿ 1 ನೇ ಆರೋಪಿಯನ್ನು ವಶಕ್ಕೆ ಪಡೆದು ಸಂಜೆ 5.00 ಗಂಟೆಗೆ ಚಾಸಾ 46 ರವರ ಮುಂದೆ ಹಾಜರುಪಡಿಸಿರುತ್ತೇನೆ. ವರದಿಯನ್ನು ನಿಪಿ 40 ಎಂದು, ಸಾಕ್ಷಿ ಸಹಿಯನ್ನು ನಿಪಿ 40(ಎ) ಎಂದು ಗುರುತಿಸಲಾಯಿತು. ಮುಂದಿನ ತನಿಖೆಯನ್ನು ಚಾಸಾ 46 ರವರು ವಹಿಸಿಕೊಂಡಿರುತ್ತಾರೆ. ಸಾಕ್ಷಿ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನಾನು ವಶಪಡಿಸಿಕೊಂಡ ದಾಖಲಾತಿಗಳ ಬಗ್ಗೆ ನ್ಯಾಯಾಲಯಕ್ಕೆ ಮಾಲುಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ- ಶ್ರೀ ಪಿ.ಕೆ.ಎಸ್ ವಕೀಲರಿಂದ**

ನಾನು ಘಟನಾ ಸ್ಥಳಕ್ಕೆ ಬೇಟಿ ನೀಡುವ ಮೊದಲು ಠಾಣಾ ದಿನಚರಿಯಲ್ಲಿ ನಮೂದು ಮಾಡಿರುತ್ತೇನೆ. ನಿಪಿ 2 ಕ್ಕೆ ಖಾಲಿ ಹಾಳೆಗೆ ಸಾಕ್ಷಿದಾರರ ಸಹಿ ಪಡೆದು ನಂತರ ಠಾಣೆಯಲ್ಲಿ ಬರೆದಿದ್ದೇನೆ ಎಂದರೆ ಸರಿಯಲ್ಲ. ನಾನು ದಾಖಾಲಾತಿಗಳ ಮೇಲೆ ಸಾಕ್ಷಿದಾರರ ಸಹಿ ಪಡೆದಿರುವುದಿಲ್ಲ. ನಾನು ಆ ದಿನ ಸ್ಥಳಕ್ಕೆ ಹೋಗಿಲ್ಲ, ಯಾವುದೇ ಮಹಜರ್ ಅನ್ನು ಬರೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ವಶಕ್ಕೆ ಪಡೆದ ಸ್ಥಳದಲ್ಲಿ ಮಹಜರ್ ಬರೆದಿರುವುದಿಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ